ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025

ಚಾ.ಸಾ - 4
ಪ್ರಾ.ಸಾ - 6

ಸಾಕ್ಷಿಗೆ ದಿನಾಂಕ 05-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು	ಃ	ರುದ್ರಯ್ಯ
ತಂದೆಯ ಹೆಸರು	ಃ	ಬಸಯ್ಯ
ವಯಸ್ಸು	ಃ	42 ವರ್ಷ
ಉದ್ಯೋಗ	ಃ	ಚಾಲಕ
ವಾಸಸ್ಥಳ	ಃ	ಬಣಮಿಗಿ

<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ಗೊತ್ತಿಲ್ಲ. ಚಾಸಾ-5 ಗೊತ್ತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಒಂದು ವರ್ಷದ ಹಿಂದೆ ಪೊಲೀಸರು ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ಗುನ್ನ ಸ್ಥ,ಳದ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಗುನ್ನ ಸ್ಥ,ಳ ಪಂಚನಾಮೆಯನ್ನು ನಿಪಿ-9 ಎಂದು ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ-10 ಎಂದು ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಫೋಟೊವನ್ನು ತೋರಿಸಲಾಗಿ ಅದರಲ್ಲಿ ತಾನಿರುವುದಾಗಿ ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ಫೋಟೊವನ್ನು ನಿಪಿ-11 ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ

ದಿಃ 15-06-2025 ರಂದು ಸಂಜೆ 4-30 ರಿಂದ 5-30 ರವರೆಗೆ ಆರೋಪಿ ತೋರಿಸಿದಂತಹ ಜಾಗದಲ್ಲಿ ನಿಪಿ-9 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ನಿಪಿ-10 ರಂತೆ ಕಚ್ಚಾ ನಕಾಶೆ ತಯಾರು ಮಾಡಿ ನಿಪಿ-11 ರಂತೆ ಫೋಟೊ ತೆಗೆದಿರುತ್ತಾರೆ ಎಂದರೆ ಗೊತ್ತಿಲ್ಲ.

ಆರೋಪಿಯು ಚಾಸಾ-9 ಮತ್ತು 10ರವರಿಗೆ ಸಂಬಂಧಪಟ್ಟ ಬಂಗಾರವನ್ನು ಮಹೇಶರವರ ಮನೆಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025

ಚಾ.ಸಾ - 5
ಪ್ರಾ.ಸಾ - 7

ಸಾಕ್ಷಿಗೆ ದಿನಾಂಕ 05-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು	ಃ	ದುಂಡಪ್ಪ
ತಂದೆಯ ಹೆಸರು	ಃ	ಅಣೆಪ್ಪ
ವಯಸ್ಸು	ಃ	42 ವರ್ಷ
ಉದ್ಯೋಗ	ಃ	ಒಕ್ಕಲುತನ
ವಾಸಸ್ಥಳ	ಃ	ಬಣಮಿಗಿ

ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ಗೊತ್ತಿಲ್ಲ. ಚಾಸಾ-4 ಗೊತ್ತು. ಚಾಸಾ-9 ಮತ್ತು 10 ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

5-6 ತಿಂಗಳ ಹಿಂದೆ ಪೊಲೀಸರು ಬಂದು ನಮಗೆ ಮಹೇಶಗೌಡನ ಮನೆಗೆ ಕರೆದುಕೊಂಡು ಹೋಗಿ ಒಂದು ಪೋಟೊವನ್ನು ತೆಗೆದಿರುತ್ತಾರೆ.

ಸಾಕ್ಷಿಗೆ ಗುನ್ನ ನಿಪಿ-9 ಸ್ಥಳ ಪಂಚನಾಮೆ ಮತ್ತು ನಿಪಿ-10 ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಗಳನ್ನು ನಿಪಿ-9(ಬಿ) ಮತ್ತು ನಿಪಿ-10(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-11 ಪೋಟೊವನ್ನು ತೋರಿಸಲಾಗಿ ಅದರಲ್ಲಿ ತಾನಿರುವುದಾಗಿ ನೋಡಿ ಒಪ್ಪಿಕೊಂಡಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ

ದಿಃ 15-06-2025 ರಂದು ಸಂಜೆ 4-30 ರಿಂದ 5-30 ರವರೆಗೆ ಆರೋಪಿ ತೋರಿಸಿದಂತಹ ಜಾಗದಲ್ಲಿ ನಿಪಿ-9 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ನಿಪಿ-10 ರಂತೆ ಕಚ್ಚಾ ನಕಾಶೆ ತಯಾರು ಮಾಡಿ ನಿಪಿ-11 ರಂತೆ ಫೋಟೊ ತೆಗೆದಿರುತ್ತಾರೆ.

ಆರೋಪಿಯು ಚಾಸಾ-9 ಮತ್ತು 10ರವರಿಗೆ ಸಂಬಂಧಪಟ್ಟ ಬಂಗಾರವನ್ನು ಮಹೇಶರವರ ಮನೆಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025

ಚಾ.ಸಾ- 7

ಪ್ರಾ.ಸಾ - 8

ಸಾಕ್ಷಿಗೆ ದಿನಾಂಕ 05-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು	ಃ	ಕುಮಾರ ಗೌಡ
ತಂದೆಯ ಹೆಸರು	ಃ	ಶಿವಲಿಂಗಪ್ಪ
ವಯಸ್ಸು	ಃ	30 ವರ್ಷ
ಉದ್ಯೋಗ	ಃ	ಚಾಲಕ
ವಾಸಸ್ಥಳ	ಃ	ಗೊಬ್ಬುರು ತಾಃ ಅಫ್ಜಲ್ಪುರ

<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನ್ಯಾಯಾಲಯದ ಮುಂದಿರುವ ಆರೋಪಿತಳು ನನಗೆ ಗೊತ್ತಿಲ್ಲ. ಚಾಸಾ-1, 6, 9 ಮತ್ತು ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ಇದ್ದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-12 ಎಂದು ಸಾಕ್ಷಿ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

7 ತಿಂಗಳ ಹಿಂದೆ ಸದರಿ ಸಹಿಯನ್ನು ಜೇವರ್ಗಿಯ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಬಂಗಾರದ ಆಭರಣಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಇನ್ನೊಂದು ಆಭರಗಳನ್ನು ತೂಕ ಮಾಡುವ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ಇದ್ದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-13 ಎಂದು ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಬಂಗಾರದ ಆಭರಗಳನ್ನು ತೂಕ ಮಾಡಿರುವ ಬಗ್ಗೆ ಮಾಹಿತಿ ಇಲ್ಲ ಆದರೆ ಫೋಟೊ ತೆಗೆದಿರುತ್ತಾರೆ.

ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿದ್ದರಿಂದ ಸದರಿ ಫೋಟೋಗಳನ್ನು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಯಾವ ವಿಚಾರವಾಗಿ ತೆಗೆದುಕೊಂಡಿರುತ್ತಾರೆಂದು ಗೊತ್ತಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ

ದಿಃ 18-06-2025 ರಂದು ಸಾಯಂಕಾಲ 6-15 ರಿಂದ 7-00 ಗಂಟೆವರೆಗೆ ಜೇವರ್ಗಿಯ ವೃತ್ತ ಪೊಲೀಸ್ ಠಾಣೆಯಲ್ಲಿ ನಿಮ್ಮ ಮತ್ತು ಚಾಸಾ-6ರವರ ಸಮಕ್ಷಮ ನಿಪಿ-12 ರಂತೆ ಪಂಚನಾಮೆ ಮಾಡಿ 3 ತೊಲೆ ಬಂಗಾರದ ತಾಳಿಸಾಮಾನು, 5 ತೊಲೆ 9 ಗ್ರಾಂ 2 ಬಂಗಾರದ ಬಳೆಗಳು, 5 ತೊಲೆ 8 ಗ್ರಾಂ ಬಂಗಾರದ ಕೊರಳಿಗೆ ಹಾಕುವ ಸರ , 2 ತೊಲೆಯ ಬಂಗಾರದ ಗುಂಡಿನ ಸರಗಳನ್ನು ಆರೋಪಿಯಿಂದ ಕಳ್ಳತನವಾದ ವಿಚಾರವಾಗಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ನಿಪಿ-14 ರಂತೆ ಫೋಟೊ ತೆಗೆದಿರುತ್ತಾರೆ ಎಂದರೆ ಫೊಟೊ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ.

ದಿನಾಂಕ 18-06-2025 ರಂದು ಸಂಜೆ 7-15 ರಿಂದ 8-00 ಗಂಟೆವರೆಗೆ ಚಾಸಾ-8ರವರನ್ನು ಕರೆಯಿಸಿ ನಿಮ್ಮ ಮತ್ತು ಚಾಸಾ-6ರವರ ಸಮಕ್ಷಮ ಆರೋಪಿತಳಿಂದ ಜಪ್ತಿಪಡಿಸಿಕೊಂಡಂತಹ ಬಂಗಾರದ ಆಭರಣಗಳನ್ನು ತೂಕ ಮಾಡಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಫೊಟೊ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಿಪಿ-15 ರಂತೆ ಫೊಟೊ ತೆಗೆದಿರುತ್ತಾರೆ ಎಂದರೆ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025

ಚಾ.ಸಾ- 15

ಪ್ರಾ.ಸಾ - 9

ಸಾಕ್ಷಿಗೆ ದಿನಾಂಕ 05-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು	ಃ	ಸಿದ್ದರಾಮ
ತಂದೆಯ ಹೆಸರು	ಃ	ಯಲಗೊಂಡ ಪಾಟೀಲ
ವಯಸ್ಸು	ಃ	38 ವರ್ಷ
ಉದ್ಯೋಗ	ಃ	ಮುಖ್ಯ ಪೇದೆ, ಜೇವರ್ಗಿ ಪೊಲೀಸ್ ಠಾಣೆ
ವಾಸಸ್ಥಳ	ಃ	ಜೇವರ್ಗಿ

<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

2023 ರಿಂದ ಇಲ್ಲಿಯವರೆಗೆ ನಾನು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಚಾಸಾ-17ರವರ ಆದೇಶದ ಪ್ರಕಾರ ದಿನಾಂಕ 18-6-2025 ರಂದು ನನಗೆ ಮತ್ತು ಚಾಸಾ-16 ರವರಿಗೆ ಆರೋಪಿತಳಿಗೆ ಕರೆದುಕೊಂಡು ಬರಲು ಹೇಳಿದರು. ಅದರ ಪ್ರಕಾರ ನಾವು ಆರೋಪಿತಳ ಮನೆ ಹತ್ತಿರ ಹೋದಾಗ ಆರೋಪಿತಳು ಇರಲಿಲ್ಲ. ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತೇನೆ ಎಂದು ಹೇಳಿ ಹೋಗಿದ್ದಾಳೆ ಎಂದು ಬಾತ್ಮಿದಾರರ ಮುಖಾಂತರ ಗೊತ್ತಾಯಿತು, ನಂತರ ನಾವು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಮಧ್ಯಾಹ್ನ 2 ಗಂಟೆಗೆ ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತಿದ್ದಳು. ಆರೋಪಿತಳನ್ನು ಕರೆದುಕೊಂಡು ಹೋಗಿ ಚಾಸಾ-17ರವರ ಮುಂದೆ ಹಾಜರುಪಡಿಸಿರುತ್ತೇವೆ.

ಸಾಕ್ಷಿಗೆ ಜ್ಞಾಪನಾ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರವನ್ನು ನಿಪಿ-16 ಎಂದು ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವರದಿಯನ್ನು ನಿಪಿ-17 ಎಂದು ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತಳ ಪರ ಶ್ರೀ ಸಿ.ಆರ್.ಪಿ. ವಕೀಲರಿಂದ</u>

ನಿಮ್ಮ ಮೇಲಾಧಿಕಾರಿಯ ಮಾತು ಕೇಳಿ ಆರೋಪಿತಳನ್ನು ಚಾಸಾ-17ರವರ ಮುಂದೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ